ಸಹ ಈ ಸಭೆಗೆ ಅಗೌರವ ತರುವುದಾಗಲಿ ಅಥವಾ ನಾಪತ್ತೆಯಾಗಲಿ, ಅಥವಾ ಉದ್ದೇಶಪೂರ್ವಕವಾಗಿ ಇಲ್ಲಿ ತಪ್ಪಿಸಿಕೊಂಡು ಹೋಗಬೇಕೆನ್ನುವುದಾಗಲಿ ಇಲ್ಲ. ಗುರುವಾರ ಈ ರೀತಿಯಾಗಿ ನನ್ನ ಮೇಲೆ ಒಂದು ಪಬ್ಲಿಸಿಟಿ ಮಾಡಿದ್ದಾರೆ. ನಾನು ಆಲ್ಲಿದ್ದೇನೆ ಎಂದು ಮಾನ್ಯ ಈ ಸಭೆಯ ಉಪನಾಯಕರೂ ಹೇಳಿದ್ದಾರೆ. ಆಲ್ಲಿ ಕೆಲಸ ಮುಗಿಸಿಕೊಂಡು ಬರುತ್ತೇನೆಂದು ನಾನು ಹೇಳಿ ಹೋಗಿದ್ದೇನೆ. ಮಾನ್ಯ ಸದಸ್ಯರು ಈ ತರಹ ಮನೋಭಾವ ಹೊಂದಕೊಳ್ಳಬಾರದು ಎಂದು ಹೇಳುತ್ತೇನೆ.

ಅಧ್ಯಕ್ಷರು —ಮೊದಲು ವಿಷಯ ಗೊತ್ತಿರಲಿಲ್ಲ, ನಂತರ ಗೊತ್ತಾಯಿತು. ಆಮೇಲೆ ಹೇಳಿದೆ. I did inform the House that you were there in the other House.

ಶ್ರೀ ಜಿ.ಬಿ. ಶಂಕರರಾವ್.—ನಾನು ಉತ್ತರ ಕೊಡುವುದಕ್ಕೆ ಆವಾಗ ಅಲ್ಲಿ ಇರಲೇಬೇಕಾಗಿತ್ತು.

ಅಧ್ಯಕ್ಷರು,—ನಾನು ಆದನ್ನು ತಿಳಿದುಕೊಂಡೇ ನಿಮ್ಮ ಎರಡು ಗಮನ ಸೆಳೆಯುವ ಸೂಚನೆಯನ್ನು ಮುಂದಿನ ದಿವಸಕ್ಕೆ ಹಾಕಿದ್ದು. ಪತ್ರಿಕೆಗಳ ಪ್ರಸಂಗ ಈ ಸದನದಲ್ಲಿ ತರುವುದು ಬೇಡ.

ಶ್ರೀ ಜಿ.ಬಿ. ಶಂಕರರಾವ್.—ಯಾರಾದರೂ ಪತ್ರಿಕಾ ವರದಿಗಾರರು ಇವರು ಆಲ್ಲೂ ಇಲ್ಲ. ಇಲ್ಲೂ ಇಲ್ಲ, ನಾಪತ್ತೆಯಾಗಿದ್ದಾರೆ ಎಂದು ಹೆಡ್‌ಲೈನ್ ಬಂದು ಬಿಟ್ಟರೆ ಅದು ಈ ಸಭೆಯ ಗೌರವದ ಪ್ರಶ್ನೆಯಾಗುತ್ತದೆ. ನಾನು ಯಾವ ವಿಧದಲ್ಲೂ ಈ ಸಭೆಗೆ ಅಗೌರವ ಮಾಡಬೇಕೆನ್ನುವುದಾಗಲಿ ತಪ್ಪಿಸಿಕೊಂಡು ಹೋಗಬೇಕೆನ್ನುವುದಾಗಲಿ ಉದ್ದೇಶ ಇಲ್ಲ. ಆವೊತ್ತಿನ ದಿವಸ ನಾನು ನನ್ನ ಸಬ್ಜಕ್ಟ್‌ಗೆ ಉತ್ತರ ಕೊಡಬೇಕಾದ್ದರಿಂದ ನಾನು ಆ ಸದನದಲ್ಲಿ ಪೂರ್ತಿ ಕಾಲ ಇರಬೇಕಾಯಿತು.

ಅಧ್ಯಕ್ಷರು.—ಮೊದಲು ಗೊತ್ತಿರಲಿಲ್ಲ. ಅನಂತರ ವಿಷಯ ಗೊತ್ತಾಯಿತು, ವಿಷಯ ಗೊತ್ತಾದ ಮೇಲೆ ಸಭೆಗೆ ತಿಳಿಸಿ ನಿಮ್ಮ ಎರಡು ಗಮನ ಸೆಳೆಯುವ ಸೂಚನೆಯನ್ನು ಮುಂದಕ್ಕೆ ಹಾಕಿದೆ.

ಶ್ರೀ ಜಿ.ಬಿ. ಶಂಕರರಾವ್.—ನಾನೂ ಕೂಡ ತಮಗೆ ಕಾಗದ ಬರೆದು ಕಳುಹಿಸಿದ್ದೆ.

CALLING ATTENTION TO A MATTER OF URGENT PUBLIC IMPORTANCE

Reg.—The hardship caused to the ryots who come under the Atchcut of Irrigation Pump sets in Arkalgud taluk.

SRI K. B. MALLAPPA (Arkalgud).—Sir, I call the attention of the Minister for Transport and Minor Irrigation to the hardship caused to the ryots who come under the Atchcut of Irrigation Pump-sets in Arkalgud taluk due to non-supply of water to the fields.

SRI M. M. J. SADYOJATHA (Minister for Transport and Minor Irrigation).—Mr. Speaker Sir, I would like to make the following statement :

The following 12 Lift Irrigation Schemes on Cauvery river in Arakalgud Taluk were executed under Agricultural production programme and commissioned during the years noted against each scheme mentioned below.

Sl. No.	Name of Scheme	Atchkat in Hectrs.	Year of Commission
1	2	3	4
1.	Lift Irrigation Scheme near Navile	48	1972
2.	Lift Irrigation Scheme Kudlur	112	1972
3.	Lift Irrigation Scheme Anandur	92	1972
4.	Lift Irrigation Scheme Moole Hosahally	136	1972
5.	Lift Irrigation Scheme Rudrapatna	200	1972
6.	Lift Irrigation Scheme Bandipalya	250	1973
7.	Lift Irrigation Scheme Kaduvina Hosahally	122	1972
8.	Lift Irrigation Scheme Betsege	128	1972
9.	Lift Irrigation Scheme Ullenahally	160	1975
10.	Lift Irrigation Scheme Kattepura	120	1974
11.	Lift Irrigation Scheme Sargur	80	1972
12.	Lift Irrigation Scheme Banagundi	136	1972

The Lift Irrigation Schemes are functioning and it has been observed that some repairs are required on the electrical side, such as replacement of wiring, etc. water has been given so far for wet and summer crops.

Water could not be given to the full atchkat during 1982 summer, due to some repairs to the electrical connections. The Executive Engineer, Hassan Division has inspected the Lift Irrigation Schemes along with the Assistant Executive Engineer, Electrical and has got up estimates for repairs towards the electrical installation at a total cost of Rs. 1,54,900 for all the 12 L. I. Schemes as shown below.

Sl. No.	Name of the Scheme	Amount as per A. M. Estimate
1	2	3
1	Lift Irrigation Scheme near Navile	Rs. 10,500
2	Lift Irrigation Kudlur	Rs. 6,300
3	Lift Irrigation Anandur	Rs. 18,000
4	Lift Irrigation Moole Hosahally	Rs. 18,000
5	Lift Irrigation Rudrapatna	Rs. 18,000
6	Lift Irrigation Bandipalya	Rs. 22,000
7	Lift Irrigation Kaduvina Hosahally	Rs. 7,700
8	Lift Irrigation Betsoge	Rs. 9,500
9	Lift Irrigation Ullenahally	Rs. 10,500
10	Lift Irrigation Kattepura	Rs. 15,700
11	Lift Irrigation Sargur	Rs. 9,400
12	Lift Irrigation Banagundi	Rs. 9,300
	Total	Rs. 1,54,900

The Executive Enginrer has taken action to call for quotation for all the electrical items and has reported that the work will be taken up and completed by the end of June 1982 and water will be made available by the second week of July 1982.

ಶ್ರೀ ಕೆ.ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ ೧೨ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳು ಇರತಕ್ಕಂಥಾದ್ದು ನ್ಯಾಯವಾದರೂ ಕೂಡ ಅದೆಲ್ಲಾ ಎಷ್ಟು ಅಚ್ಚುಕಟ್ಟಾಗುತ್ತದೆ ಎಂಬ ಬಗ್ಗೆ ಅವರ ಹೇಳಿಕೆಯಲ್ಲಿ ವಿವರವನ್ನು ಕೊಟ್ಟಿದ್ದಾರೆ. ಇದರಲ್ಲಿ ರುದ್ರಾಪಟ್ಟಣವನ್ನು ತೆಗೆದುಕೊಂಡರೆ ೨೦೦ ಎಕರೆ ಅಚ್ಚುಕಟ್ಟು ಪ್ರದೇಶ ಇದೆಯೆಂದು ತೋರಿಸಿದ್ದಾರೆ. ಅದರಲ್ಲಿ ೨೫ ಎಕರೆಗೆ ಇವತ್ತಿನ ದಿವಸ ನೀರು ಹೋಗುತ್ತಾ ಇಲ್ಲ. ಏಕೆಂದರೆ ಅಲ್ಲಿ ಮೋಟಾರನ್ನು ರನ್ ಮಾಡುವುದಕ್ಕೆ ಅಪಾಯಿಂಟ್ ಮಾಡಿದ್ದಾರಲ್ಲ ಆ ಮನುಷ್ಯ ನಾನ್ ಟೆಕ್ನಿಕಲ್ ಮ್ಯಾನ್ ಇದ್ದಾನೆ. ಸುಮ್ಮನೆ ದಾರಿಯಲ್ಲಿ ಹೋಗ ತಕ್ಕಂಥವನನ್ನು, ಯಾರೋ ಅನುಭವ ಇಲ್ಲದವನನ್ನು, ಹೆಬ್ಬೆಟ್ಟು ಪಾಕತಕ್ಕಂಥವನನ್ನು ಅಲ್ಲಿಗೆ ನೇಮಕ ಮಾಡಿದ್ದಾರೆ. ಅಂತಹವನನ್ನು ನೇಮಕ ಮಾಡಿರುವುದರಿಂದ ಮೋಟಾರ್ ಹೀಟ್ ಬಂದಿದೆಯೇ ಇಲ್ಲಿವೇ. ಅದನ್ನು ಯಾವ ಓಲ್ಟೇಜ್‌ನಲ್ಲಿ ಓಡಿಸಬೇಕು, ಮೋಟಾರ್ ಯಾವ ಓಲ್ಟೇಜ್‌ನಲ್ಲಿ ಓಡಿದರೆ ಅದು ಬರ್ನ್ ಆಗುವುದಿಲ್ಲ ಎನ್ನತಕ್ಕಂಥ ವಿಚಾರಗಳು ಆ ನಾನ್‌ಟೆಕ್ನಿಕಲ್ ಪೀಪಲ್‌ಗೆ ಗೊತ್ತಾಗುತ್ತಿಲ್ಲ. ಅಂತಹವನನ್ನು ಅಪಾಯಿಂಟ್ ಮಾಡಿದ್ದಾರೆ. ಈ ಬಗ್ಗೆ ವರ್ಷೇ ವರ್ಷೇ ಏನಾದರೂ ಒಂದು ಕಂಪ್ಲೈಂಟ್ ಇದ್ದೇ ಇರುತ್ತದೆ. ವರ್ಷಕ್ಕೆ ೨-೩ ಮೋಟಾರ್‌ಗಳು ಸುಟ್ಟು ಹೋಗುತ್ತಿವೆ. ಒಂದೊಂದು ಪಂಪ್ ಸೆಟ್‌ಗೆ ಈಗಾಗಲೇ ೨-೩ ಮೋಟಾರ್‌ಗಳನ್ನು ಬದಲಾಯಿಸಿದ್ದಾರೆ. ಆ ಮೋಟಾರನ್ನು ಆಲ್ಟರ್‌ನೇಟಿವ್ ಡೇಸ್‌ನಲ್ಲಿ ಓಡಿಸಬೇಕು, ಸೈಮಲ್‌ಟೇನಿಯಸ್ ಆಗಿ ಓಡಿಸಬಾರದು ಎಂದು ಇದೆ. ಇದು ಆ ಮನುಷ್ಯನಿಗೆ ಗೊತ್ತಾಗುತ್ತಿಲ್ಲ. ರುದ್ರಾಪಟ್ಟಣದಲ್ಲಿ ೩ ಮೋಟಾರುಗಳು ಇದ್ದವು. ಆ ಮೂರರಲ್ಲಿ ಎರಡು ಮೋಟಾರ್‌ಗಳು ಸುಟ್ಟು ಹೋಗಿವೆ. ಈಗ ಒಂದು ಮೋಟಾರ್ ಮಾತ್ರ ಚಾಲು

ವಾಗಿದೆ. ಆ ೨ ಹೋಟಾರುಗಳನ್ನು ಒಂದು ವರ್ಷದಿಂದ ರಿಪೇರಿ ಮಾಡಿಸುತ್ತೇವೆ ಎಂದು ಸಂಬಂಧ ಪಟ್ಟವರು ಹೇಳಿದ್ದರೂ ಕೂಡ ಈವರೆಗೆ ಅದನ್ನು ರಿಪೇರಿ ಮಾಡಿಸಿಲ್ಲ. ಈಗ ಆ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಆ ಬಗ್ಗೆ ಟೆಂಡರ್ ಕರೆದು ಈ ಜೂನ್ ಎಂಡ್‌ಗೆ ರಿಪೇರಿ ಮಾಡಿಸುತ್ತೇನೆ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದರು ಆದರೆ ಅವರು ಈವರೆಗೆ ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇದರಲ್ಲಿ ಅವರದೇನೂ ತಪ್ಪಿಲ್ಲ. Executive Engineer is no doubt a good man and a good worker. ಸರ್ಕಾರದವರಿಂದ ಅವರಿಗೆ ರಿಪೇರಿಗೆ ಬೇಕಾದಂತಹ ಹಣ ಮತ್ತು ಸವಲತ್ತುಗಳು ಬಾರದಿದ್ದರೆ ಅವರು ತಾನೆ ಏನು ಮಾಡುತ್ತಾರೆ? ಅವರು ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಮತ್ತು ನಮ್ಮ ಸ್ನೇಹಿತರೊಬ್ಬರು ಅಲ್ಲಿಗೆ ಭೇಟಿ ಕೊಟ್ಟಿದ್ದೆವು. ಲಿಫ್ಟ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಅಲ್ಲಿ ಲಿಫ್ಟ್ ಇರಿಗೇಷನ್ ಚಾನಲ್ಸ್, ತೆಗೆದಿರುತ್ತಾರೆ. ಆದರೆ ಅಧಿಕಾರಿಗಳು ಫೀಲ್ಡ್ ಹತ್ತಿರ ಹೋಗುವುದಿಲ್ಲ.ಟ್ಯಾಂಕ್ ತುಂಬಾ ನೀರು ತುಂಬಿರುತ್ತದೆ. ಅದನ್ನು ಸರಿಯಾಗಿ ರೆಗ್ಯುಲೇಟ್ ಮಾಡುವುದಿಲ್ಲ.ಈ ಲಿಫ್ಟ್ ಇರಿಗೇಷನ್‌ಗೆ ನೀರನ್ನು ಕೆಲವು ಚಾನಲ್‌ಗಳ ಮೂಲಕ ತೆಗೆದುಕೊಂಡು ಹೋಗಬೇಕು. ಅಲ್ಲಿ ನಾವು ನೋಡಿದ ಹಾಗೆ ನೀರನ್ನು ರೆಗ್ಯುಲೇಟ್ ಮಾಡಿಲ್ಲ.ಅದನ್ನು ರೆಗ್ಯುಲೇಟ್ ಮಾಡುವುದಕ್ಕೆ ಇಬ್ಬರು ಇರುತ್ತಾರೆ. ಈ ಲಿಫ್ಟ್ ಇರಿಗೇಷನ್ ಸ್ಕೀಮ್‌ನಲ್ಲಿ ಅದನ್ನು ರೆಗ್ಯುಲೇಟ್ ಮಾಡಬೇಕಾದರೆ ಆಲ್ಟರ್‌ನೇಟಿವ್ ಡೇಸ್‌ನಲ್ಲಿ ಅದನ್ನು ಮಾಡಬೇಕಾಗುತ್ತದೆ. ಇವತ್ತು ಒಬ್ಬ ರಜಾ ತೆಗೆದುಕೊಳ್ಳುತ್ತಾನೆ ಎಂದರೆ ಇನ್ನೊಬ್ಬ ರಜರು ಇರುತ್ತಾನೆ. ನಾಳೆ ಇವನು ಹೋಗುತ್ತಾನೆ, ಅವನು ಬರುತ್ತಾನೆ, ಹೀಗೆ ಆಲ್ಟರ್‌ನೇಟಿವ್ ಡೇಸ್‌ನಲ್ಲಿ ಅವರಲ್ಲಿ ಒಬ್ಬರಾದರೂ ಇದ್ದು ಕೆಲಸ ಮಾಡಬೇಕಾಗುತ್ತದೆ, ಅಲ್ಲಿ ಮೋಟಾರ್ ನೋಡಿಕೊಳ್ಳುವುದಕ್ಕೆ, ನೀರನ್ನು ರೆಗ್ಯುಲೇಟ್ ಮಾಡುವುದಕ್ಕೆ ಒಬ್ಬರಾದರೂ ಇರಬೇಕಾಗಿತ್ತು, ಆದರೆ ಅವರು ಹಾಗೆ ಇರುವುದಿಲ್ಲ. ಅವರಿಬ್ಬರೂ ಮೋಟಾರ್ ಸ್ಟಾರ್ಟ್ ಮಾಡಿಬಿಟ್ಟು ಹೊರಟು ಹೋಗುತ್ತಾರೆ. ಅಲ್ಲಿ ನೀರು ಹೋಗುತ್ತಾ ಇರುತ್ತದೆ. ಮುಂದೆ ಆ ಜನರಿಗೆ ನೀರು ಬೇಕಾದಾಗ ಅವರು ಸರಿಯಾಗಿ ನೀರು ಬಿಡುವುದಿಲ್ಲ. 'ನೀರನ್ನು ಸರಿಯಾಗಿ ಬಿಡಿ' ಎಂದು ಕೇಳಿದರೆ, ನೀರನ್ನು ಕೊಡುವುದಕ್ಕೂ ನಮಗೂ ಸಂಬಂಧವಿಲ್ಲ ಎಂದು ಹೇಳುತ್ತಾರೆ. ಇಂತಹ ಒಂದು ಸ್ಥಿತಿಯಲ್ಲಿ ಅಲ್ಲಿ ಅಚ್ಚುಕಟ್ಟು ಪ್ರದೇಶದಲ್ಲಿ ೨೦೦. ೧೫೦, ೨೫೦, ೧೨೫, ೧೬೦ ಎಕರೆಗಳು ಏನಿವೆ ಅದೆಲ್ಲವನ್ನೂ ಒಟ್ಟು ಸೇರಿಸಿದರೆ ಎಷ್ಟಾಗುತ್ತದೋ ಅದರಲ್ಲಿ ಕೇವಲ ೫೦೦ ಎಕರೆಯಷ್ಟು ಜಮೀನು ಸಾಗುವಳಿಯಾಗುತ್ತಾ ಇಲ್ಲ. ಅದೆಲ್ಲಾ ಏತಕ್ಕೆ ಸಾಗುವಳಿಯಾಗುತ್ತಾ ಇಲ್ಲ ಎಂದರೆ ಅಲ್ಲಿ ನೀರನ್ನು ರೆಗ್ಯುಲೇಟ್ ಮಾಡಿ ಬಿಡುತ್ತಾ ಇಲ್ಲ. ಅಲ್ಲಿ ಟೆಕ್ನಿಕಲ್ ಪೀಪಲ್ಸನ್ನು ಅಪಾಯಿಂಟ್ ಮಾಡದೇ ಮೋಟಾರ್‌ಗಳನ್ನು ಸರಿಯಾದ ರೀತಿಯಲ್ಲಿ, ವ್ಯವಸ್ಥಿತ ರೀತಿಯಿಂದ ನೋಡಿಕೊಳ್ಳದೇ ಇರುವುದರಿಂದ ಹೀಗೆಲ್ಲಾ ಆಗುತ್ತಾ ಇದೆ.

ಅಧ್ಯಕ್ಷರು.—ಎಲ್ಲವನ್ನೂ ಈಗಲೇ ಹೇಳಿಬಿಡುತ್ತೀರಾ?

ಶ್ರೀ ಕೆ.ಬಿ. ಮಲ್ಲಪ್ಪ. ಸ್ವಾಮಿ, ನಾನು ಮಾನ್ಯ ಮಂತ್ರಿಯವರಿಗೆ ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕೊಡಬೇಕಾಗುತ್ತದೆ ಆದ್ದರಿಂದ ಎಲ್ಲವನ್ನೂ ಹೇಳುತ್ತಿದ್ದೇನೆ. ನನ್ನ ಮಾದಾಪುರ ಹೋಬಳಿಯಲ್ಲಿ ಇನ್ನೊಂದು ಲಿಫ್ಟ್ ಇರಿಗೇಷನ್ ಸ್ಕೀಮ್ ಬಂದಿದೆ. ಅಲ್ಲಿ ಒಂದು ಮೋಟಾರನ್ನು ಇನ್‌ಸ್ಟಾಲ್ ಮಾಡಿ ೩ ವರ್ಷವಾಗಿದೆ. ಅದಕ್ಕೆ ೬ ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ, ಅಲ್ಲಿ ೫೦. ೬೦ ಸಾವಿರದ ಒಂದು ಸ್ಟಾರ್ಟರನ್ನು ತಂದು ಹಾಕಿಲ್ಲ. ಇವತ್ತು ಆ ಮೋಟಾರ್ ಐಡಲ್ ಆಗಿದೆ. ಅಲ್ಲಿನ ಜನರು ಪ್ರತಿವರ್ಷ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಬರೆದು 'ಆ ಮೋಟಾರನ್ನು ಸ್ಟಾರ್ಟ್ ಮಾಡಿ ನಮಗೆ ಸೌಕರ್ಯ ಮಾಡಿಕೊಡಿ' ಎಂದು ಒತ್ತಾಯ ಮಾಡುತ್ತಿದ್ದಾರೆ. ಆ ಬಗ್ಗೆ ಆ ಅರ್ಜಿಯನ್ನು ಎಲ್ಲಾ ಲೆವೆಲ್‌ನಲ್ಲೂ ಮೂವ್ ಮಾಡಿಸಿದ್ದಾರೆ ಆದರೂ ಇನ್ನೂ ಕೂಡ ಆ ಮೋಟಾರ್ ಸ್ಟಾರ್ಟ್ ಆಗಿಲ್ಲ. ರೈತರಿಗೆ ನೀರನ್ನು ಕೊಟ್ಟಿಲ್ಲ ಪರಿಸ್ಥಿತಿ ಈ ರೀತಿ ಇರುವುದರಿಂದ, ಅಲ್ಲಿ ಎಲ್ಲಾ ಕೆಲಸಗಳೂ ಸಾಮಾನ್ಯವಾಗಿ ವ್ಯವಸ್ಥಿತ ರೀತಿಯಲ್ಲಿ ನಡೆಯುವ ದೃಷ್ಟಿಯಿಂದ ಈ ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಐಟಿಐ ಟ್ರೈನಿಂಗ್ ಮಾಡಿರತಕ್ಕಂಥ, ಈ ಮೋಟಾರ್ ಟೆಕ್ನಿಷಿಯನ್ ಬಗ್ಗೆ ಒಳ್ಳೆಯ ಪರಿಜ್ಞಾನ ಇರತಕ್ಕಂಥ ಒಬ್ಬ ಟೆಕ್ನಿಕಲ್ ಮ್ಯಾನನ್ನು ಅಪಾಯಿಂಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಸಾಮಾಜಿಕ ಸಮಾನರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗಾಗಲೇ ಅಲ್ಲಿ ಬೆಳೆ ಇಡತಕ್ಕಂಥ ಸೀಸನ್ ಕಮೆನ್ಸ್ ಆಗಿದೆ. ಗದ್ದೆ ಮಾಡತಕ್ಕಂಥವರಿಗೆ ಇವತ್ತಿನವರೆಗೂ ನೀರು ಕೊಟ್ಟಿಲ್ಲ. ಈಗಾಗಲೇ ಜೂನ್ ತಿಂಗಳು ಮುಗಿದಿದೆ. ಆ ಭೂಮಿಯನ್ನು ಮಟ್ಟ ಮಾಡಿ ಅದಕ್ಕೆ ನೀರು ಹಾಯಿಸಿ ಹದ ಮಾಡ

ಬೇಕಾದರೆ ಇನ್ನೂ ಒಂದೂವರೆ ತಿಂಗಳಾಗುತ್ತದೆ. ಸುಮಾರು ಆಗಸ್ಟ್ ಕೊನೆಯ ಹೊತ್ತಿಗೆ ನಾಟಿ ಮಾಡಿದರೆ ಈ ಸೀಸನ್‌ನಲ್ಲಿ ಬೆಳೆ ಆಗುತ್ತದೆ. ಇಲ್ಲದಿದ್ದರೆ ಸಂಪೂರ್ಣವಾಗಿ ಎಲ್ಲಾ ನಾಶವಾಗುತ್ತದೆ. ಈ ಗದ್ದೆಯಲ್ಲಿ ನಾಟಿ ಮಾಡದಿದ್ದರೆ ಎಲ್ಲಾ ಕೊರೆ ಬೀಳುತ್ತದೆ. ಆಮೇಲೆ ಮುಂದಕ್ಕೆ ಯೀಲ್ಡ್ ಕಡಿಮೆ ಯಾಗುತ್ತದೆ. ಒಂದು ಎಕರೆಯಲ್ಲಿ ೨೦ ಕ್ವಿಂಟಾಲ್ ಆಗತಕ್ಕಂಥಾದ್ದು ಅದು ೧೦ ಕ್ವಿಂಟಾಲ್‌ಗೆ ಬರುತ್ತದೆ.

ಅಧ್ಯಕ್ಷರು.—ಈಗ ನಮ್ಮ ಮುಂದೆ ಇರತಕ್ಕಂಥ ವಿಚಾರದ ಬಗ್ಗೆ ಹೇಳಿ. ಅದರಲ್ಲಿ ಏನೇನು ನ್ಯೂನತೆ ಇದೆಯೆಂಬುದನ್ನು ಹೇಳಿ. ಮಾನ್ಯ ಮಂತ್ರಿಯವರು ಏನಾದರೂ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಕೆ ಬಿ, ಮಲ್ಲಪ್ಪ.—ಸ್ವಾಮಿ, ಅಲ್ಲಿ ಚಾನಲ್‌ನಲ್ಲಿ ನೀರು ಬರುತ್ತಾ ಇಲ್ಲ. ರೈತರಿಗೆ ಸಕಾಲ ದಲ್ಲಿ ನೀರು ಕೊಟ್ಟಿಲ್ಲ. ಅವರಿಗೆ ಸಕಾಲದಲ್ಲಿ ನೀರು ಕೊಡಬೇಕು. ಈ ಬಗ್ಗೆ ಅಲ್ಲಿ ಇರತಕ್ಕಂಥ ಮೋಟಾರನ್ನು ತಕ್ಷಣ ರಿಪೇರಿ ಮಾಡಿಸಿ ಅಲ್ಲಿಯ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಯವರನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ಎಂ, ಜೆ. ಸದ್ಯೋಜಾತ.—ಮಾನ್ಯ ಅಧ್ಯಕ್ಷರೇ, ಅಲ್ಲಿ ಕೆಲಸಗಳು ನಡೆಯುತ್ತಿಲ್ಲ. ಮೋಟಾರ್‌ಗಳು ಕೆಟ್ಟು ಹೋಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಮ್ಮ ಚೀಫ್ ಇಂಜಿನಿಯರ್‌ರವರನ್ನು ಅಲ್ಲಿಗೆ ಕಳಿಸಿಕೊಟ್ಟು ಈ ಬಗ್ಗೆ ನಾನು ಇನ್ಸ್‌ಪೆಕ್ಷನ್ ಮಾಡಿಸುತ್ತೇನೆ. ಇನ್ನು ೮-೧೦ ದಿವಸದಲ್ಲಿ ನಾನು ಅಲ್ಲಿಯ ರೈತರಿಗೆ ನೀರನ್ನು ಒದಗಿಸಿಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ಈ ವಿಚಾರದಲ್ಲಿ ನೀರು ಸರಬರಾಜು ವ್ಯವಸ್ಥೆ ಸರಿಯಾಗಿ ಇಲ್ಲದ ಕಾರಣ ರೈತರಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದರೂ ಇವತ್ತಿನ ದಿವು ನಿಮ್ಮ ಬೇಡಿಕೆ ಬಗ್ಗೆ ಹಣ ಕೇಳುತ್ತಾ ಇದ್ದೀರಿ. ಇಂತಹ ಸಂದರ್ಭದಲ್ಲಿ ರೈತರಿಗೆ ಆಗಿರತಕ್ಕಂಥ ತೊಂದರೆಯ ಬಗ್ಗೆ ಪರಿ ಶೀಲನೆ ಮಾಡಿ ಎಲ್ಲೆಲ್ಲಿ ರೈತರಿಗೆ ನೀರು ಕೊಟ್ಟಿಲ್ಲ ಅಲ್ಲಿ ಅಂತಹ ರೈತರಿಗೆ ಪರಿಹಾರ ಕೊಡುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಎಗ್ಸಾಮಿನ್ ಮಾಡಿಸುತ್ತೇನೆ. ಅವರಿಂದ ರಿಪೋರ್ಟ್ ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಒಂದು ನೋಟೀಸ್ ಕೊಟ್ಟು ಸುಮಾರು ಒಂದು ವಾರವಾಯಿತು. ಅದರಲ್ಲಿ ಕೊಣನೂರಿನ ವಿಚಾರ ಹೇಳಿದ್ದೇನೆ. ಇನ್ನೂ ಉತ್ತರ ಬರಲಿಲ್ಲ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳೋಣ.

Finaneial Business

Discussion on the Demands for grants for 1982-8
Rural Development and Panchayatraj

ಶ್ರೀ ಬಿ. ರಾಮಯ್ಯ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ ನಮ್ಮ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಸಂವಾರು ೧೪-೧೫ ಜನ ಮಾನ್ಯ ಸದಸ್ಯರು ಅತ್ಯಂತ ಸ್ವಾರಸ್ಯಕರವಾದಂತಹ ಚರ್ಚೆಯನ್ನು ಮಾಡಿ ದ್ದಾರೆ. ಗ್ರಾಮೀಣ ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆ, ಸಮುದಾಯ ಅಭಿವೃದ್ಧಿ, ವಿಶೇಷ ಆರ್ಥಿಕ ಕಾರ್ಯಕ್ರಮಗಳು ಅಭಾವ ಪೀಡಿತ ಪ್ರದೇಶಗಳ ಸುಧಾರಣೆ, ಯೋಜನೆ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ, ರಾಷ್ಟ್ರೀಯ ಉದ್ಯೋಗ ದೃಢೀಕರಣ ಯೋಜನೆ, ಈ ಎಲ್ಲಾ ವಿಷಯಗಳ ಮೇಲೆ ನಮ್ಮ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಾ ಹೊಸ ರೀತಿಯ ಬೆಳಕನ್ನು ಚೆಲ್ಲಿ ಅನೇಕ ವಿಷಯ ಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಚರ್ಚೆಯಲ್ಲಿ ಪಾಲ್ಗೊಂಡು ಹೊಸ ಹುರುಪು ಕೊಡು ವಂತಹ ಸಲಹೆಗಳನ್ನು ನಮ್ಮ ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಆದರೆಲ್ಲಿಯೂ ಸಹ ಪೊಟ್ಟಪೊದಲ ನೆಯದಾಗಿ ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಪ್ರಭಾಕರ್‌ರವರು ತಮ್ಮ ಹಳೆಯ ಅನುಭವದ ಮೇಲೆ ಹೇಗೆ ಈ ಗ್ರಾಮಾಭಿವೃದ್ಧಿ ಖಾತೆ ಮುಂದುವರಿಯಬೇಕು ಎನ್ನುವ ಅಭಿಪ್ರಾಯವನ್ನು ಸೂಚನೆ